1	2	3	4	5	6	7
9.	Dharwad	372	356	1575	2331	817
10.	Gulbarga	611	622	584	1666	314
11.	Hassan	784	467	488	1491	819
12.	Kolar	1328	1074	527	346	271
13.	Mandya	733	328	427	739	784
14.	Mysore	1898	715	1250	1675	1489
15.	North Kanara	532	755	596	1019	240
16.	Raichur	338	334	835	686	1354
17.	Shimoga	504	728	526	603	734
18.	South Kanara	769	589	873	855	797
19.	Tumkur	528	448	738	2181	208
	Grand Total	**14084**	**10813**	**15771**	**25352**	**13772**

ರಾಷ್ಟ್ರೀಕೃತ ಮಾರ್ಗಗಳನ್ನು ಖಾಸಗಿಯವರಿಗೆ ವಹಿಸುವುದು

599 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕ.ರಾ.ರ.ಸಾ.ಸಂ.ಯು ಕೆಲವು ರಸ್ತೆಗಳನ್ನು ಖಾಸಗಿಯವರಿಗೆ ವಹಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಆ) ಬಿ.ಟಿ.ಎಸ್.ನ ಕೆಲವು ಮಾರ್ಗಗಳನ್ನು ಇದರಲ್ಲಿ ಸೇರಿದೆಯೋ?

ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗ್ರಾಮ ಸಹಾಯಕರುಗಳ ನೇಮಕ

605 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹಂಗಾಮಿ ಗ್ರಾಮ ಸಹಾಯಕರುಗಳ ಹುದ್ದೆಯನ್ನು ಖಾಯಂಗೊಳಿಸುವ ಬಗ್ಗೆ ಸರಕಾರ ಭರವಸೆ ನೀಡಿರುವುದೇ?*

ಆ) *ಹಾಗಿದ್ದಲ್ಲಿ, ರಾಜ್ಯದ ಎಷ್ಟು ಜಿಲ್ಲೆಗಳಿಂದ, ಜಿಲ್ಲಾಧಿಕಾರಿಗಳ ವರದಿ ಬಂದಿರುತ್ತದೆ?*

ಇ) *ಸರ್ಕಾರ ಯಾವಾಗ ಈ ಗ್ರಾಮ ಸಹಾಯಕರುಗಳ ಹುದ್ದೆಯನ್ನು ಖಾಯಂ ಗೊಳಿಸುವುದು, ವರದಿ ಬಂದರೂ ವಿಳಂಬವಾಗಲು ಕಾರಣಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಇಲ್ಲ.

ಆ) 18.

ಇ) ಈ ವಿಚಾರದಲ್ಲಿ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 29424:94 ಇತ್ಯರ್ಥಕ್ಕಾಗಿ ಬಾಕಿ ಇರುವುದರಿಂದ ಈ ಪ್ರಶ್ನೆಗೆ ಈ ಹಂತದಲ್ಲಿ ಉತ್ತರಿಸಲಾಗುವುದು ಸಾಧ್ಯವಾಗುವುದಿಲ್ಲ.

ಮನೆ ಬಾಡಿಗೆ ನಿಯಂತ್ರಣ ಕಾಯ್ದೆ ರದ್ದುಪಡಿಸಿರುವ ಬಗ್ಗೆ.

606 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮನೆ ಬಾಡಿಗೆ ನಿಯಂತ್ರಣ ಕಾಯ್ದೆ ರದ್ದುಪಡಿಸಿರುವುದರಿಂದ ಮಧ್ಯಮವರ್ಗದ ಮತ್ತು ಬಡಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಮನೆ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ರದ್ದುಪಡಿಸಿರುವುದಿಲ್ಲ.. ಬಾಡಿಗೆ ನಿಯಂತ್ರಣ ಕಾಯ್ದೆ 1961ರ ಕಲಂ 4,5 ಮತ್ತು 10 ಎ ವಿಧಿಗಳನ್ನು ಈ ಕೆಳಗಿನ ನಗರಗಳಲ್ಲಿ ಮಾತ್ರ ಸ್ಥಗಿತ ಗೊಳಿಸಲಾಗಿದೆ.

1) ಬೆಂಗಳೂರು

2) ಹುಬ್ಬಳ್ಳಿ-ಧಾರವಾಡ

3) ಗುಲ್ಬರ್ಗಾ

4) ಮೈಸೂರು

5) ಮಂಗಳೂರು